

بِسۡمِ اللّٰہِ الرَّحۡمٰنِ الرَّحِیۡمِ

# ಹಝ್ರತ್ ಮುಹಮ್ಮದ್(ಸ.ಅ)ರ ಸಹಾಬಿಗಳ ಮಹೋನ್ನತ ಸ್ಥಾನಮಾನ – 2

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 22-12-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಸಹಾಬ ರಿಝ್ವಾನುಲ್ಲಾಹಿ ಅಲೈಹಿಮ್‌ರವರ ವೈಭವ, ಅನುಗ್ರಹಗಳು ಮತ್ತು ಅವರ ಮಾದರಿ ವರ್ತನೆ ಬಗ್ಗೆ ವಿವರಿಸಿದ್ದೆನು. ಕೆಲವು ಸಹಾಬರ ಜೀವಿತದ ಬಗ್ಗೆ ಹೇಳಿದ್ದೆನು. ಇನ್ನಷ್ಟು ವಿವರಿಸಲು ಇಚ್ಛಿಸಿದ್ದೆನು. ಆದರೆ ಸಮಯದ ಕೊರತೆಯ ಕಾರಣ ಅದು ಸಾಧ್ಯವಾಗಲಿಲ್ಲ. ಅನಂತರ ಜನರು ಬರೆದ ಪತ್ರಗಳಿಂದ ನಾನು ಭಾವಿಸಿದೆ, ನಾನು ಯಾವ ಸಹಾಬರ ಬಗ್ಗೆ ಟಿಪ್ಪಣಿ ತಯಾರಿಸಿದ್ದೆನೋ ಕನಿಷ್ಠಪಕ್ಷ ಅವರ ಬಗ್ಗೆಯಾದರೂ ವಿವರಿಸಬೇಕೆಂದು. ಆ ಮೂಲಕ ನಮಗೆ ಹೆಚ್ಚು ಸಹಾಬರ ಬಗ್ಗೆ ಮಾಹಿತಿ ದೊರಕುವುದು. ಅವರ ಬಲಿದಾನಗಳ ಬಗ್ಗೆ ನಮಗೆ ತಿಳಿಯುವುದು. ನಾವು ಅವರ ಮಾದರಿಯನ್ನು ಅನುಸರಿಸುವ ಬಗ್ಗೆ ನಮಗೆ ಶ್ರದ್ಧೆಯುಂಟಾಗುವುದು. ಆದುದರಿಂದ ಈ ದಿನ ನಾನು ಸಹಾಬರ ಬಗ್ಗೆ ಪ್ರಸ್ತಾಪಿಸುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಬ್ಬ ಮಹತ್ವಶಾಲಿ ಸಹಾಬಿ ಅಬೂಉಬೈದ ಬಿನ್ ಜರಾಹ್ ಆಗಿದ್ದರು. ಒಬ್ಬ ಸಹಾಬಿಯಾಗಿದ್ದ ಕಾರಣ ಅವರಿಗೆ ಖಂಡಿತವಾಗಿ ಒಂದು ಸ್ಥಾನವಿತ್ತು. ಅವರು ಅನೇಕ ವೈಶಿಷ್ಟ್ಯಗಳನ್ನು ಹೊಂದಿದವರಾಗಿದ್ದರು. ಅವರ ಪ್ರಾಮಾಣಿಕತೆಯ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ಪ್ರಶಸ್ತಿಯ ಕುರಿತು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ನಜ್ರಾನಿನ ಪ್ರತಿನಿಧಿ ಸಂಘದವರು ನಜ್ರಾನಿನ ಜನರಿಂದ ತೆರಿಗೆ ವಸೂಲಿ ಮಾಡಲು ಒಬ್ಬರನ್ನು ಕಳುಹಿಸಬೇಕೆಂದು ಅಪೇಕ್ಷಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ನಿಮ್ಮ ಬಳಿಗೆ ಎಂತಹ ಓರ್ವ ವ್ಯಕ್ತಿಯನ್ನು ಕಳುಹಿಸುವೆನೆಂದರೆ ಆ ವ್ಯಕ್ತಿ ಸಂಪೂರ್ಣವಾಗಿ ಪ್ರಾಮಾಣಿಕರಾಗಿರುವರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಸಹಾಬಿಗೆ ಈ ಗೌರವ ನೀಡಲು ಬಯಸುತ್ತಾರೆಂದು ತಿಳಿಯಲು ಸಹಾಬರೆಲ್ಲರೂ ತಲೆಯೆತ್ತಿ ನೋಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಬೂ ಉಬೈದ ಎದ್ದು ನಿಲ್ಲಲಿ ಎಂದು. ಹಝ್ರತ್ ಅಬೂ ಉಬೈದರನ್ನು ಅಲ್ಲಿಗೆ ಕಳುಹಿಸಲಾಯಿತು. ಅಬೂ ಉಬೈದರ ಬಗ್ಗೆ ಹಝ್ರತ್ ಅನಸ್ ರಝಿಯಲ್ಲಾಹು ಅನ್‌ಹುರವರ ಒಂದು ವರದಿ ಹದೀಸಿನಲ್ಲಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪ್ರತಿಯೊಂದು ಸಮುದಾಯದಲ್ಲಿ ಒಬ್ಬ ಅಮೀನ್ ಇರುತ್ತಾನೆ. ಓ ನನ್ನ ಸಮುದಾಯವೇ, ನಮ್ಮ ಅಮೀನ್ ಅಬೂ ಉಬೈದ ಬಿನ್ ಜರಾಹ್ ಆಗಿದ್ದಾರೆ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ನೀಡಿದ ಗೌರವವಾಗಿದೆ.

ಅಬೂ ಉಬೈದರ ವಿನಯ, ಪರಸ್ಪರ ಸಹಕಾರ ಮತ್ತು ಬುದ್ಧಿಪೂರ್ವಕವಾಗಿ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಂಬಂಧಿಸಿ ಒಂದು ಘಟನೆ ಹೀಗಿದೆ: ಒಂದು ಯುದ್ಧಕ್ಕೋಸ್ಕರ ಅಮರಿಬ್ನುಲ್ ಆಸ್‌ರನ್ನು ಸೇನಾಧಿಪತಿಯಾಗಿ ಕಳುಹಿಸಲಾಗಿತ್ತು. ಯುದ್ಧ ಕ್ಷೇತ್ರಕ್ಕೆ ಹೋದಾಗ ಅಲ್ಲಿ ಶತ್ರುಗಳ ಸಂಖ್ಯೆ ಹೆಚ್ಚಿದೆ ಎಂದು ತಿಳಿಯಿತು. ಅಮರ್‌ರವರ ಸೈನ್ಯದಲ್ಲಿ ಗ್ರಾಮೀಣ ಅರಬಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮುಹಾಜಿರೀನ್ ಹಾಗೂ ಹಿರಿಯ ಸಹಾಬರ ಸಂಖ್ಯೆ ಕಡಿಮೆ ಇತ್ತು. ಅಮರಿಬ್ನುಲ್ ಆಸ್ ಹೆಚ್ಚು ಸಹಾಯಕ್ಕೆ ಅಪೇಕ್ಷಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಉಬೈದರ ನೇತೃತ್ವದಲ್ಲಿ ಮತ್ತೊಂದು ಸೇನಾದಳವನ್ನು ಕಳುಹಿಸಿದರು. ಇಬ್ಬರು ಸೇನಾಧಿಪತಿಗಳು ಪರಸ್ಪರ ಸಹಕಾರದಿಂದ ಕೆಲಸ ನಿರ್ವಹಿಸಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಉಬೈದರಿಗೆ ಉಪದೇಶಿಸಿದರು. ಅಮರ್ ಬಿನ್ ಆಸ್ ಯೋಚಿಸಿದರು, ಹೊಸ ಸೇನಾದಳ ನಮಗೆ ಸಹಾಯ ಮಾಡಲು ಬಂದಿದೆ. ಆದುದರಿಂದ ಅದು ನನ್ನ ಅಧೀನವಾಗಿದೆ ಎಂದು. ಅವರು ಅಬೂ ಉಬೈದರ ನೇತೃತ್ವವಿದ್ದ ಸೈನಿಕರಿಗೆ ನೇರವಾಗಿ ಆಜ್ಞೆ ನೀಡಲು ಪ್ರಾರಂಭ ಮಾಡಿದರು. ಆ ಸಂದರ್ಭದಲ್ಲಿ ಅಬೂ ಉಬೈದ ವಾಗ್ವಾದ ಮಾಡದೆ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನನ್ನು ಸ್ವತಂತ್ರ ಸೇನಾಧಿಪತಿಯಾಗಿ ಕಳುಹಿಸಿದ್ದರೂ ಅವರು ಪರಸ್ಪರ ಸಹಕಾರ ನೀಡಲು ಸಹ ಉಪದೇಶಿಸಿದ್ದಾರೆ. ಆದುದರಿಂದ ನೀವು ನನ್ನ ಮಾತು ಅಂಗಿಕರಿಸಿದರೂ ಅಂಗೀಕರಿಸಲಿಲ್ಲವಾದರೂ ನಾನು ತಮ್ಮ ಪ್ರತಿಯೊಂದು ಮಾತನ್ನು ಅಂಗೀಕರಿಸುವೆನು. ನಿಮಗೆ ನನ್ನಿಂದ ಸಹಕಾರ ದೊರಕುವುದು ಎಂದು ಹೇಳಿದರು. ಸೂಕ್ಷ್ಮ ಪರಿಸ್ಥಿತಿಯಲ್ಲಿ ಸರಿಯಾದ ನಿರ್ಧಾರಮಾಡಿ ಮುಸ್ಲಿಮರ ಶಕ್ತಿಯನ್ನು ಬಲಪಡಿಸಲು ತಮ್ಮ ಅಧಿಕಾರವನ್ನು ಸಹ ತ್ಯಜಿಸಿದ ಉದಾಹರಣೆಯಿದು. ಇದು ಮುಸ್ಲಿಮರು ಪರಸ್ಪರ ಹೊಂದಬೇಕಾದ ಸಹಕಾರ ಮನೋಭಾವವಾಗಿದೆ. ಇಂದಿನ ಮುಸ್ಲಿಮರು ಹೀಗೆ ಮಾಡುವುದಾದರೆ ಮುಸ್ಲಿಮರಿಗೆ ಬೃಹತ್ತಾದ ಶಕ್ತಿ ದೊರಕುವುದು. ಇಂದಿನ ಕಾಲದಲ್ಲಿ ಮುಸ್ಲಿಮರಿಗೆ ಇದು

ಆವಶ್ಯಕವಾಗಿದೆ. ಮುಸ್ಲಿಮರು ಪರಸ್ಪರ ಹೀಗೆ ಸಹಕಾರ ನೀಡಿ ವರ್ತಿಸಬೇಕೆಂಬ ವಿವೇಕ ಮುಸ್ಲಿಮರಲ್ಲಿ ಮೂಡಿದ್ದರೆ ಎಷ್ಟು ಚೆನ್ನಾಗಿತ್ತು.

ನ್ಯಾಯಪಾಲನೆ ಮತ್ತು ಪ್ರಾಮಾಣಿಕತೆಯ ಮೂಲಕ ಮಾತ್ರ ಲೋಕದಲ್ಲಿ ಶಾಂತಿಸ್ಥಾಪನೆಯ ಖಾತರಿ ನೀಡಬಹುದಾಗಿದೆ. ದೊಡ್ಡ ಶಕ್ತಿಗಳು ಚಿಕ್ಕ ಸರಕಾರಗಳನ್ನು, ನಮ್ಮ ಇಚ್ಛೆಯ ಪ್ರಕಾರ ವರ್ತಿಸಿರಿ ಇಲ್ಲವಾದರೆ ನಾವು ನಿಮ್ಮ ವಿರುದ್ಧ ಕ್ರಮ ಜರಗಿಸುವೆವು ಎಂದು ಬೆದರಿಕೆ ಒಡ್ಡುವುದರಿಂದ ಇದು ಸಾಧ್ಯವಾಗದು. ಬಹುತೇಕ ಮುಸ್ಲಿಮ್ ದೇಶಗಳಲ್ಲಿ ಜನರಿಂದ ತೆರಿಗೆ ವಸೂಲು ಮಾಡಿ ಅದನ್ನು ಜನರಿಗೋಸ್ಕರ ಖರ್ಚು ಮಾಡದೆ ಆ ದೇಶಗಳ ಬಹುತೇಕ ನಾಯಕರು ತಮ್ಮ ವೈಯ್ಯಕ್ತಿಕ ಖಜಾನೆಗಳನ್ನು ಭರ್ತಿಮಾಡುತ್ತಾರೆ ಮತ್ತು ಸಂದೇಶವಾಹಕರ ಮತ್ತು ಸಹಾಬರ ಬಗ್ಗೆ ತಮಗಿರುವ ಪ್ರೀತಿಯ ಬಗ್ಗೆ ಘೋಷಣೆ ಕೂಗುತ್ತಾರೆ.

ಹಝ್ರತ್ ಅಬ್ಬಾಸ್[ರ] ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪರಾಗಿದ್ದರು. ಅವರು ಔದಾರ್ಯ ಮತ್ತು ಸಂಬಂಧಿಕರ ಬಗ್ಗೆ ಪ್ರೀತಿಯಲ್ಲಿ ಪ್ರಸಿದ್ಧರಾಗಿದ್ದರು. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಬ್ಬಾಸರು ಖುರೈಶಿಗಳಲ್ಲಿ ಎಲ್ಲರಿಗಿಂತಲೂ ಹೆಚ್ಚು ದಾನಧರ್ಮ ನೀಡುವವರೂ ಸಂಬಂಧಿಕರ ಬಗ್ಗೆ ಶ್ರದ್ಧೆಯುಳ್ಳವರೂ ಆಗಿದ್ದಾರೆ ಎಂದು. ಈ ಮಾತನ್ನು ಆಲಿಸಿದ ಹಝ್ರತ್ ಅಬ್ಬಾಸರು[ರ] ಎಪ್ಪತ್ತು ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಿದರು. ಆ ಸಹಾಬರ ಔದಾರ್ಯದ ಮಟ್ಟ ಆ ರೀತಿ ಇತ್ತು.

ಇನ್ನೊಬ್ಬ ಸಹಾಬಿ ಹಝ್ರತ್ ಜಅಫರ್[ರ] ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪನ ಮಗನೂ ಹಝ್ರತ್ ಅಲಿಯವರ ಸಹೋದರನೂ ಆಗಿದ್ದರು. ಅವರು ಸಹ ಇಸ್ಲಾಮಿನ ಆರಂಭ ಕಾಲದಲ್ಲಿ ಮುಸ್ಲಿಮರಾಗುವ ಭಾಗ್ಯ ಗಳಿಸಿದ್ದರು. ಅವರು ಮಕ್ಕದ ಪರಿಸ್ಥಿತಿಯ ಕಾರಣ ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಿದ್ದರು. ಈ ವಿಷಯ ಮಕ್ಕದವರಿಗೆ ತಿಳಿದಾಗ ಅವರು ತಮ್ಮ ಇಬ್ಬರು ಮುಖಂಡರನ್ನು ಅಬಿಸೀನಿಯಾ ದೇಶಕ್ಕೆ ಕಳುಹಿಸಿದರು. ಅಬಿಸೀನಿಯಾದ ಮುಖಂಡರಿಗೆ ನೀಡಲು ಅನೇಕ ಪಾರಿತೋಷಿಕಗಳನ್ನು ಸಹ ಕಳುಹಿಸಿದ್ದರು. ಅವರು ಹೀಗೆ ಸಂದೇಶ ಕಳುಹಿಸಿದ್ದರು: ನಮ್ಮ ಕೆಲವು ಅವಿವೇಕಿಗಳಾದ ತರುಣರು ತಮ್ಮ ಧರ್ಮ ತ್ಯಾಗಮಾಡಿ ನಿಮ್ಮ ದೇಶಕ್ಕೆ ಬಂದಿದ್ದಾರೆ. ಅವರು ನಿಮ್ಮ ಧರ್ಮವನ್ನು ಸಹ ಅವಲಂಬಿಸುವುದಿಲ್ಲ. ಅವರದು ಸಂಪೂರ್ಣವಾಗಿ ಹೊಸ ಧರ್ಮವಾಗಿದೆ.

ಅಬಿಸೀನಿಯಾದ ದೊರೆ ನಜ್ಜಾಶಿ ಅವಿಶ್ವಾಸಿಗಳ ಮಾತುಗಳನ್ನು ಆಲಿಸಿ, ತನ್ನ ದೇಶಕ್ಕೆ ಆಗಮಿಸಿದ ಮುಸ್ಲಿಮರನ್ನು ತನ್ನ ಆಸ್ಥಾನಕ್ಕೆ ಕರೆದನು. ಮುಸ್ಲಿಮರು ಬಹಳ ಗಾಬರಿಗೊಂಡಿದ್ದರು. ದೊರೆ ತಮ್ಮೊಂದಿಗೆ ಹೇಗೆ ವರ್ತಿಸುವನೆಂದು ಅವರು ಆತಂಕಗೊಂಡಿದ್ದರು. ನಜ್ಜಾಶಿ ಮುಸ್ಲಿಮರೊಂದಿಗೆ ಕೇಳಿದನು, ನೀವು ನಿಮ್ಮ ಧರ್ಮವನ್ನು ತ್ಯಜಿಸಲು ಕಾರಣವೇನು? ನೀವು ಹಿಂದಿನ ಸಮುದಾಯಗಳ ಧರ್ಮವನ್ನು ಸ್ವೀಕರಿಸಿಲ್ಲ. ನಮ್ಮ ಧರ್ಮವಾದ ಕ್ರೈಸ್ತ ಧರ್ಮವನ್ನೂ ನೀವು ಸ್ವೀಕರಿಸಿಲ್ಲ. ಆಗ ಹಝ್ರತ್ ಜಅಫರ್ ರಝಿಯಲ್ಲಾಹು ಅನ್‌ಹುರವರು ಮುಸ್ಲಿಮರನ್ನು ಪ್ರತಿನಿಧೀಕರಿಸಿ ಹೀಗೆ ಹೇಳಿದರು: ಓ ದೊರೆ, ನಾವು ಅಜ್ಞಾನಿಗಳಾದ ವಿಗ್ರಹಾರಾಧಕರಾಗಿದ್ದೆವು. ಸತ್ತ ಮೃಗಗಳನ್ನು ತಿನ್ನುತ್ತಿದ್ದೆವು. ಕೆಟ್ಟಕೆಲಸ ಮಾಡುತ್ತಿದ್ದೆವು. ಸಂಬಂಧಿಕರೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸುತ್ತಿದ್ದೆವು. ನಮ್ಮ ಪೈಕಿ ಬಲಶಾಲಿಗಳು ಬಲಹೀನರನ್ನು ದಬಾಯಿಸುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಅಲ್ಲಾಹನು ಒಬ್ಬ ಸಂದೇಶವಾಹಕನನ್ನು ನಮಗೆ ನಿಯೋಜಿಸಿದನು. ಅವರ ಸಭ್ಯತೆ, ಸತ್ಯಸಂಧತೆ, ಪ್ರಾಮಾಣಿಕತೆ, ಪರಿಶುದ್ಧತೆ ಮತ್ತು ಕೌಟುಂಬಿಕ ಶ್ರೇಷ್ಠತೆ ಬಗ್ಗೆ ನಮಗೆ ಚೆನ್ನಾಗಿ ತಿಳಿದಿತ್ತು. ಅವರು ನಮ್ಮನ್ನು ಅಲ್ಲಾಹನ ಏಕತ್ವ ಮತ್ತು ಆರಾಧನೆಯ ಕಡೆಗೆ ಆಮಂತ್ರಿಸಿದರು. ನಾವು ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬಾರದೆಂದೂ ವಿಗ್ರಹಗಳನ್ನು ಪೂಜಿಸಬಾರದೆಂದೂ ಅವರು ಉಪದೇಶಿಸಿದರು. ಸತ್ಯಸಂಧತೆ, ಪ್ರಾಮಾಣಿಕತೆ, ಕೌಟುಂಬಿಕ ಸೌಹಾರ್ದ, ನೆರೆಹೊರೆಯವರೊಂದಿಗೆ ಉತ್ತಮ ವರ್ತನೆ, ಅನಾವಶ್ಯಕ ರಕ್ತಪಾತ ಮತ್ತು ಜಗಳ ಮಾಡದಿರುವ ಬಗ್ಗೆ ಅವರು ನಮಗೆ ಉಪದೇಶಿಸಿದರು. ಅಶ್ಲೀಲ ವರ್ತನೆ, ಸುಳ್ಳು ಹೇಳುವುದು, ಅನಾಥರ ಸೊತ್ತು ಕಬಳಿಸುವುದು, ಪತಿವ್ರತೆಯರ ವಿರುದ್ಧ ದೋಷಾರೋಪ ಹೊರಿಸುವುದು ಮೊದಲಾದುವುಗಳಿಂದ ನಮ್ಮನ್ನು ತಡೆದರು. ನಾವು ಏಕ ದೇವನನ್ನು ಆರಾಧಿಸಬೇಂದು ಅವರು ಆಜ್ಞಾಪಿಸಿದರು. ನಾವು ಆ ಸಂದೇಶವಾಹಕರನ್ನು ನಂಬಿ ಅವರು ಹೇಳಿದ ಹಾಗೆ ವರ್ತಿಸುತ್ತಿದ್ದೇವೆ. ಈ ಕಾರಣದಿಂದ ನಮ್ಮ ಜನಾಂಗದವರು ನಮ್ಮನ್ನು ವಿರೋಧಿಸುತ್ತಿದ್ದಾರೆ. ಅವರು ನಮಗೆ ಕಷ್ಟವನ್ನು ನೀಡಿದರು. ಅವರ ಹಿಂಸಾಚಾರ ಮಿತಿಮೀರಿದಾಗ ನಾವು ನಮ್ಮ ದೇಶವನ್ನು ತ್ಯಜಿಸಿ ನಿಮ್ಮ ಆಶ್ರಯ ಪಡೆಯಲು ಬಂದೆವು. ಏಕೆಂದರೆ ನಾವು ನಿಮ್ಮ ನ್ಯಾಯನಿಷ್ಠೆಯ ಕೀರ್ತಿಯನ್ನು ಕೇಳಿದ್ದೆವು. ಈ ದೇಶದಲ್ಲಿ ನಮ್ಮ ವಿರುದ್ಧ ದೌರ್ಜನ್ಯ ನಡೆಯಲಾರದೆಂದು ನಾವು ಪ್ರತೀಕ್ಷಿಸುತ್ತೇವೆ. ನಜ್ಜಾಶಿ ಈ ಮಾತುಗಳಿಂದ ಬಹಳ ಪ್ರಭಾವಿತನಾಗಿ ಹೇಳಿದನು: ನಿಮ್ಮ ಸಂದೇಶವಾಹಕರಿಗೆ ಅವತೀರ್ಣವಾದ ದೇವವಚನಗಳಲ್ಲಿ ಕೆಲವನ್ನು ನನಗೆ ಓದಿ ಹೇಳಿರಿ. ಆಗ ಸೂರತುಲ್ ಮರ್‌ಯಮ್‌ನಿಂದ ಕೆಲವು ವಚನಗಳನ್ನು ಓದಿ ಹೇಳಲಾಯಿತು. ಆ ವಚನಗಳನ್ನು ಬಹಳ ಇಂಪಾಗಿ ಓದಿದಾಗ ನಜ್ಜಾಶಿ ಅಳಲು ಪ್ರಾರಂಭಿಸಿದನು. ಅವನು ಹೇಳಿದನು– ದೇವನಾಣೆ, ಈ ವಚನಗಳು ಮತ್ತು ಪ್ರವಾದಿ ಮೂಸಾರವರ ವಚನಗಳು ಒಂದೇ ಮೂಲಸ್ಥಾನದಿಂದ ಅವತೀರ್ಣವಾದುವು ಎಂದು ತೋರುತ್ತದೆ. ಮಕ್ಕದ ಅವಿಶ್ವಾಸಿಗಳ ದೂತರೊಂದಿಗೆ ದೊರೆ ಹೇಳಿದನು: ನಾನು ಈ ಜನರನ್ನು ನಿಮಗೆ ಮರಳಿಸಲಾರೆನು. ಅವರು ಇಲ್ಲಿಯೇ ವಾಸಿಸುವರು. ಮಕ್ಕದ ದೂತರು ಪರಸ್ಪರ ಸಮಾಲೋಚಿಸಿ

ದೊರೆಯೊಂದಿಗೆ ದೂರಿದರು: ಈ ಜನರು ಈಸಾರನ್ನು ಕ್ರೈಸ್ತರ ನಂಬಿಕೆ ಪ್ರಕಾರ ನಂಬುವುದಿಲ್ಲ. ಅವರ ಪದವಿಯನ್ನು ತಗ್ಗಿಸುತ್ತಿದ್ದಾರೆ ಎಂದು ಹೇಳಿದರು. ಆಗ ದೊರೆ ಮುಸ್ಲಿಮರನ್ನು ಪುನಃ ಕರೆಯಿಸಿ ಈಸಾರ ಬಗ್ಗೆ ಅವರ ನಂಬಿಕೆ ಏನೆಂದು ವಿಚಾರಿಸಿದರು. ಹಝ್ರತ್ ಜಅಫರ್[ರ] ಹೇಳಿದರು: ಈಸಾರ ಬಗ್ಗೆ ನಮ್ಮ ಸಂದೇಶವಾಹಕರಿಗೆ ಅವತೀರ್ಣವಾದ ವಚನಗಳಲ್ಲಿ ಅವರನ್ನು ಅಲ್ಲಾಹನ ಓರ್ವ ದಾಸರೆಂದೂ ಅವನ ಸಂದೇಶವಾಹಕರೆಂದೂ ಕನ್ಯೆ ಮರ್‌ಯಮ್‌ಗೆ ಅಲ್ಲಾಹನಿಂದ ದಯಪಾಲಿಸಲ್ಪಟ್ಟವರೆಂದೂ ತಿಳಿಸಲಾಗಿದೆ. ನಜ್ಜಾಶಿ ನೆಲದಿಂದ ಒಂದು ಹುಲ್ಲುಕಡ್ಡಿ ಎತ್ತಿ ಹಿಡಿದು ಹೇಳಿದರು: ಹಝ್ರತ್ ಈಸಾರವರ ಪದವಿ ನೀವು ವಿವರಿಸಿದುದಕ್ಕಿಂತ ಈ ಹುಲ್ಲುಕಡ್ಡಿಯಷ್ಟು ಸಹ ಹೆಚ್ಚಿಗೆ ಇಲ್ಲ ಎಂದು ಹೇಳಿದರು. ಮುಸ್ಲಿಮರೊಂದಿಗೆ, ನಿಮಗೆ ಇಲ್ಲಿ ಪರಿಪೂರ್ಣ ಸ್ವಾತಂತ್ರ್ಯವಿದೆ ಎಂದು ಸಹ ಹೇಳಿದರು. ಹಾಗೆ ಹಝ್ರತ್ ಜಅಫರ್[ರ]ರವರ ಬುದ್ಧಿಶಾಲಿತ್ವ ಮತ್ತು ಜ್ಞಾನ ಮುಸ್ಲಿಮರು ಆ ದೇಶದಲ್ಲಿ ವಾಸಿಸುವಂತೆ ಮಾಡಲು ಸಹಕಾರಿಯಾಯಿತು.

ಇನ್ನೊಬ್ಬ ಸಹಾಬಿ ಮುಸ್‌ಅಬ್ ಬಿನ್ ಉಮೈರ್ ಆಗಿದ್ದರು. ಅವರ ತಾಯಿ ಬಹಳ ಐಶ್ವರ್ಯವಂತರಾಗಿದ್ದರು. ಮುಸ್‌ಅಬ್ ಬಹಳ ಸುಖ ಸೌಕರ್ಯಗಳಲ್ಲಿ ಜೀವಿಸುವವರಾಗಿದ್ದರು, ಬಹಳ ಬೆಲೆಬಾಳುವ ಉಡುಪು ಧರಿಸುವವರಾಗಿದ್ದು ಬಹಳ ಸುಂದರ ತರುಣರಾಗಿದ್ದರು. ಅವರು ಮುಸ್ಲಿಮರಾದ ನಂತರ ಒಂದು ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತಿದ್ದ ಸಭೆಗೆ ಆಗಮಿಸಿದಾಗ ಅವರ ಬಟ್ಟೆಗಳು ಹರಿದು ಹೋಗಿದ್ದು ಚರ್ಮದ ತುಂಡುಗಳಿಂದ ತೇಪೆ ಹಚ್ಚಲಾಗಿತ್ತು. ಸಹಾಬರು ಅವರ ಈ ಸ್ಥಿತಿಯನ್ನು ಕಂಡು ತಲೆ ತಗ್ಗಿಸಿದರು. ಹಝ್ರತ್ ಮುಸ್‌ಅಬ್[ರ] ಸಲಾಮ್ ಹೇಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹಳ ಪ್ರೀತಿಯಿಂದ ಉತ್ತರ ಹೇಳಿದರು. ಆ ಶ್ರೀಮಂತ ವ್ಯಕ್ತಿಯ ಹಿಂದಿನ ಮತ್ತು ಇಂದಿನ ಸ್ಥಿತಿ ನೋಡಿ ಅಶ್ರುಭರಿತರಾದರು. ಅವರು ಧೈರ್ಯ ನೀಡುತ್ತಾ ಹೇಳಿದರು: ಅಲ್‌ಹಮ್‌ದುಲಿಲ್ಲಾಹ್ ಲೌಕಿಕ ಅಭಿಲಾಷೆಯುಳ್ಳವರಿಗೆ ಅವರ ಲೌಕಿಕ ಅಭಿಲಾಷೆ ಸಿದ್ಧಿಯಾಗುತ್ತದೆ. ನಾನು ಮುಸ್‌ಅಬ್‌ರನ್ನು ಹಿಂದೆ ನೋಡಿದಾಗ ನಗರದಲ್ಲಿ ಅವರಿಗಿಂತ ಹಿರಿಮೆಯುಳ್ಳವರು ಯಾರೂ ಇರಲಿಲ್ಲ. ಅವರು ತಂದೆ ತಾಯಂದಿರ ಪ್ರಿಯ ಪುತ್ರರಾಗಿದ್ದರು. ಆಹಾರ ಪಾನೀಯಗಳು ಅತ್ಯಂತ ಉತ್ಕೃಷ್ಟವಾಗಿದ್ದುವು. ಆದರೆ ಅಲ್ಲಾಹನ ಸಂದೇಶವಾಹಕನನ್ನು ಪ್ರೀತಿಸಿದ ಕಾರಣ ಅಲ್ಲಾಹನು ಅವರನ್ನು ಈ ಸ್ಥಿತಿಗೆ ತಲಪಿಸಿದನು. ಅವರು ಎಲ್ಲವನ್ನೂ ಅಲ್ಲಾಹನ ಸಂಪ್ರೀತಿ ಗಳಿಸಲು ತ್ಯಜಿಸಿದರು. ಈಗ ಅಲ್ಲಾಹನು ಅವರ ಮುಖವನ್ನು ಪ್ರಕಾಶಭರಿತವನ್ನಾಗಿ ಮಾಡಿದ್ದಾನೆ. ಹಝ್ರತ್ ಮುಸ್‌ಅಬ್[ರ] ತಬ್ಲೀಗ್ ಮಾಡುವ ಉತ್ತಮ ಸಾಮರ್ಥ್ಯ ಹೊಂದಿದ್ದರು. ಬಹಳ ಚೆನ್ನಾಗಿ ಪ್ರೀತಿಯಿಂದ ತಬ್ಲೀಗ್ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು: ನನ್ನ ಮಾತುಗಳು ನಿಮಗೆ ಇಷ್ಟವಾಯಿತೆಂದರೆ ನೀವು ಅವನ್ನು ಆಲಿಸಿರಿ. ಇಷ್ಟಪಡುವುದಿಲ್ಲವಾದರೆ ಎದ್ದು ಹೋಗಿರಿ ಎಂದು ಹೇಳುತ್ತಿದ್ದರು. ಅವರು ಮದೀನದ ಅಪರಿಚಿತರಿಗೆ ಸತ್ಯದ ಸಂದೇಶ ತಲಪಿಸಿದರು. ಅನೇಕ ಜನರು ಅವರ ತಬ್ಲೀಗಿನಿಂದ ಮುಸ್ಲಿಮರಾದರು.

ಹಝ್ರತ್ ಉಸೈದ್ ಬಿನ್ ಹುಝೈರ್ ಅನ್‌ಸಾರಿ ಅವರು ಹಝ್ರತ್ ಮುಸ್‌ಅಬ್[ರ] ಮೂಲಕ ಮುಸ್ಲಿಮರಾಗಿದ್ದರು. ಅವರ ಆಧ್ಯಾತ್ಮಿಕ ಸ್ಥಿತಿಯ ಬಗ್ಗೆ ಹದೀಸಿನಲ್ಲಿ ಹೀಗೆ ವರದಿಯಯಾಗಿದೆ. ಅವರು ಹೇಳಿದರು: ನನ್ನ ಮೂರು ಸ್ಥಿತಿಗಳು ಹೇಗಿವೆ ಎಂದರೆ ಅವುಗಳಲ್ಲಿ ಯಾವುದಾದರೊಂದು ಸ್ಥಿತಿ ನನ್ನಲ್ಲಿ ಸ್ಥಿರವಾಗಿದ್ದರೆ ನಾನು ನನ್ನನ್ನು ಸ್ವರ್ಗಕ್ಕೆ ಅರ್ಹನೆಂದು ಗಣಿಸುವೆನು. ಮೊದಲನೆಯದಾಗಿ, ನಾನು ಪವಿತ್ರ ಖುರ್‌ಆನನ್ನು ಪಠಿಸುವಾಗ ಅಥವಾ ಬೇರೆ ಯಾರಾದರೂ ಪಠಿಸುವುದನ್ನು ಆಲಿಸುವಾಗ ನನ್ನಲ್ಲಿ ಉಂಟಾಗುವ ಭಯದ ಸ್ಥಿತಿ ನನ್ನಲ್ಲಿ ಸ್ಥಿರವಾಗಿ ನೆಲೆ ನಿಂತರೆ ನಾನು ನನ್ನನ್ನು ಸ್ವರ್ಗ ಗಳಿಸುವವರಲ್ಲಿ ಒಬ್ಬನಾಗಿ ಗಣಿಸುವೆನು. ಎರಡನೆಯದಾಗಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುತ್‌ಬ ನೀಡುವಾಗ ನಾನು ಅತ್ಯಂತ ಹೆಚ್ಚು ಶ್ರದ್ಧೆಯಿಂದ ಉಪದೇಶವನ್ನು ಆಲಿಸುತ್ತೇನೆ. ಆಗ ನನ್ನ ಸ್ಥಿತಿ ಹೇಗಿರುತ್ತದೆಯೋ ಅದು ಸ್ಥಿರವಾಗಿ ಮುಂದುವರಿದರೆ ನಾನು ಸ್ವರ್ಗ ಗಳಿಸುವವರಲ್ಲಿ ಸೇರುವೆನು. ಮೂರನೆಯದಾಗಿ, ನಾನು ಯಾವುದಾದರೂ ಜನಾಝವನ್ನು ಕೊಂಡೊಯ್ಯುವವರೊಂದಿಗೆ ಸೇರುವಾಗ ನನ್ನ ಸ್ಥಿತಿ ಹೇಗಾಗುತ್ತದೆ ಎಂದರೆ ಆ ಜನಾಝ ನನ್ನದು ಎಂಬಂತೆಯೂ ನಾನು ಪ್ರಶ್ನಿಸಲ್ಪಡುವಂತೆಯೂ ತೋರುತ್ತದೆ. ನನ್ನಲ್ಲಿ ಈ ಸ್ಥಿತಿ ಸ್ಥಿರವಾಗಿದ್ದರೆ ನಾನು ಸ್ವರ್ಗವಾಸಿಗಳೊಂದಿಗೆ ಸೇರುವೆನು.

ಇವು ಅವರು ಅಲ್ಲಾಹನ ಬಗ್ಗೆ ಹೊಂದಿದ್ದ ಪರಿಪೂರ್ಣ ಭಯವನ್ನು ಸೂಚಿಸುತ್ತವೆ. ಈ ಸ್ಥಿತಿ ಅಲ್ಲಾಹನ ಬಗ್ಗೆ ಭಯವುಂಟುಮಾಡುತ್ತದೆ. ಮನುಷ್ಯನು ಸತ್ಕರ್ಮ ಮಾಡಲು ಪುನಃ ಪುನಃ ಪ್ರಯತ್ನಿಸುತ್ತಾನೆ. ಮತ್ತು ಪ್ರತಿ ಸಮಯದಲ್ಲಿ ಅಲ್ಲಾಹನ ನೆನಪು ಇರುತ್ತದೆ. ಅವರು ಯಾವಾಗಲೂ ಈ ಸ್ಥಿತಿಯನ್ನು ಹೊಂದುತ್ತಿದ್ದುದು ಮತ್ತು ತಾನು ಆ ಸ್ಥಿತಿಯಲ್ಲಿ ಸ್ಥಿರವಾಗಿದ್ದರೆ ಸ್ವರ್ಗ ಪಡೆಯುವವನಾಗುವೆನು ಎಂದು ಹೇಳಿದುದು ಸಾಬೀತುಗೊಳಿಸುವುದೇನೆಂದರೆ ಅವರು ಖಂಡಿತವಾಗಿಯೂ ಸ್ವರ್ಗ ಪಡೆಯುವವರೂ ಅಲ್ಲಾಹನ ಸಂಪ್ರೀತಿ ಗಳಿಸುವವರೂ ಆಗಿದ್ದರೆಂದು. ಒಬ್ಬ ಅನ್‌ಸಾರಿ ಸಹಾಬಿ ಅಬೀ ಬಿನ್ ಕಅಬ್ ಕರ್ಮನಿರತ ವಿದ್ವಾಂಸರಾಗಿದ್ದರು. ಅವರು ಐದು ಹೊತ್ತು ನಮಾಝ್‌ಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಕ್ರಮಬದ್ಧವಾಗಿ ನಿರ್ವಹಿಸುತ್ತಿದ್ದರು. ನಮಾಝ್‌ಗಳ ಬಗ್ಗೆ ಬದ್ಧತೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಉಪದೇಶವನ್ನು ಅವರು ಹೀಗೆ ವಿವರಿಸುತ್ತಾರೆ: ಒಂದು ದಿವಸ ಫಜರ್

ನಮಾಝ್ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಲವರು ನಮಾಝಿಗೆ ಹಾಜರಾಗದ ಬಗ್ಗೆ ವಿಚಾರಿಸಿದರು ಮತ್ತು ಹೀಗೆ ಹೇಳಿದರು: ಎರಡು ನಮಾಝ್‌ಗಳು, ಫಜರ್ ಮತ್ತು ಇಶಾ, ಬಲಹೀನ ವಿಶ್ವಾಸ ಹೊಂದಿದವರಿಗೆ ಮತ್ತು ಕಪಟ ವಿಶ್ವಾಸಿಗಳಿಗೆ ಬಹಳ ಭಾರವಾಗಿ ತೋರುತ್ತದೆ. ಈ ನಮಾಝ್‌ಗಳಿಂದ ಎಂತಹ ಅನುಗ್ರಹ ಲಭಿಸುವುದೆಂದು ಅವರಿಗೆ ತಿಳಿದಿದ್ದರೆ ಅವರು ಮೊಣಕಾಲೂರಿ ನಡೆದುಬರಬೇಕಾಗಿದ್ದರೂ ಈ ನಮಾಝ್‌ಗಳಿಗೆ ಹಾಜರಾಗುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿದ್ದ ಯಾವುದರ ಕಾರಣದಿಂದ ಸಹಾಬರು ಇಷ್ಟು ಸತ್ಯನಿಷ್ಠೆ ಪ್ರಕಟಿಸಿದರು. ಅವರು ವಿಗ್ರಹಾರಾಧನೆ ಮತ್ತು ಸೃಷ್ಟಿ ಪೂಜೆಗಳಿಂದ ಮುಖ ತಿರುಗಿಸಿದರು. ಮಾತ್ರವಲ್ಲದೆ ಅವರೊಳಗಿಂದ ಲೌಕಿಕ ಸುಖದ ಆಶೆಯೇ ಅಳಿಸಿ ಹೋಯಿತು. ಅವರು ಅಲ್ಲಾಹನನ್ನು ಕಾಣಲು ತೊಡಗಿದರು. ಅವರು ಅಲ್ಲಾಹನ ಮಾರ್ಗದಲ್ಲಿ ಎಷ್ಟು ತನ್ಮಯರಾಗಿದ್ದಾರೆಂದರೆ ಅವರಲ್ಲಿ ಪ್ರತಿಯೊಬ್ಬರು ಇಬ್ರಾಹೀಮ್ ಆಗಿದ್ದರು. ಅವರು ಅತ್ಯಂತ ನಿಷ್ಠೆಯಿಂದ ಅಲ್ಲಾಹನ ಮಹೋನ್ನತ ಸ್ಥಿತಿಯನ್ನು ಪ್ರಕಟಿಸಲು ಎಂತಹ ಕೆಲಸಗಳನ್ನು ಮಾಡಿದರೆಂದರೆ ಅನಂತರ ಅಂತಹ ಕೆಲಸ ಮಾಡುವವರು ಎಂದೂ ಹುಟ್ಟಲಿಲ್ಲ. ಅವರು ಧರ್ಮದ ಮಾರ್ಗದಲ್ಲಿ ಪ್ರಾಣ ತ್ಯಾಗ ಮಾಡಲು ಸಿದ್ಧರಾದರು. ಶಹೀದರಾಗುವ ಭಾಗ್ಯಲಭಿಸದವರು ಯೋಚಿಸಿದರು– ಪ್ರಾಯಶಃ ನಮ್ಮ ಸತ್ಯನಿಷ್ಠೆಯಲ್ಲಿ ಏನಾದರೂ ಕೊರತೆ ಇರಬಹುದೆಂದು. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಇದನ್ನೇ ಸೂಚಿಸುತ್ತದೆ: فَمِنْهُم مَّن قَضَىٰ نَحْبَهُ وَمِنْهُم مَّن يَنتَظِرُ **ಫ ಮಿನ್‌ಹುಮ್ ಮನ್ ಖಝೂ ನಹ್‌ಬಹೂ ವ ಮಿನ್‌ಹುಮ್ ಮನ್ ಯನ್‌ತಝಿರು.** ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭವನ್ನು ಕಾಯುತ್ತಿದ್ದಾರೆ (33:24). ಆ ಸಹಾಬರಿಗೆ ಬೇರೆ ಮನುಷ್ಯರ ಹಾಗೆ ಆಶಾಭಿಲಾಷೆಗಳು ಇರಲಿಲ್ಲವೇ. ಅವರಿಗೆ ಮಕ್ಕಳ ಬಗ್ಗೆ ಪ್ರೀತಿ ಇರಲಿಲ್ಲವೇ. ಬೇರೆ ಸಂಬಂಧವಿರಲಿಲ್ಲವೇ. ಆದರೆ ಅವರನ್ನು ಧಾರ್ಮಿಕ ಆಕರ್ಷಣೆ ಎಷ್ಟು ಮತ್ತರನ್ನಾಗಿ ಮಾಡಿತ್ತೆಂದರೆ ಅವರು ಧರ್ಮಕ್ಕೆ ಪ್ರತಿಯೊಂದು ವಸ್ತುವಿನ ಮೇಲೆ ಆದ್ಯತೆ ನೀಡುವವರಾಗಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಲೌಕಿಕ ಜೀವಿತದ ದೃಷ್ಟಿಯಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಏನಿತ್ತು. ಸಹಾಬರು ತಮ್ಮ ಜೀವನವನ್ನೂ ಗೌರವವನ್ನೂ ಅಪಾಯಕ್ಕೀಡಾಗಿಸಿ ತಮ್ಮ ಸಮುದಾಯದೊಂದಿಗಿರುವ ಸಂಬಂಧವನ್ನು ಮುರಿದುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಏನನ್ನು ಪ್ರತೀಕ್ಷಿಸಿಯಾಗಿತ್ತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹಳ ಕಷ್ಟದಲ್ಲಿದ್ದರು. ಅವರ ಸುಖದುಃಖ ಕೇಳುವವರು ಯಾರೂ ಇರಲಿಲ್ಲ. ಅವರು ಮುಂದೆ ಅಭಿವೃದ್ಧಿಗಳಿಸುವ ಯಾವ ಪ್ರತೀಕ್ಷೆಯೂ ಇರಲಿಲ್ಲ. ಆದರೂ ಆ ಸಹಾಬರು, ಒಬ್ಬ ಬಡ ದರ್ವೇಶರಿಗೆ (ವಾಸ್ತವದಲ್ಲಿ ಅವರು ಓರ್ವ ವೈಭವಶಾಲಿ ದೊರೆಯಾಗಿದ್ದರು) ಎಂತಹ ವಿಷಮ ಕಾಲದಲ್ಲಿ ನಿಷ್ಠೆಯಿಂದಲೂ ಪ್ರೀತಿಯಿಂದಲೂ ಬೆಂಬಲ ನೀಡಿದರೆಂದರೆ ಆಗ ಮುಂದಿನ ಪ್ರಗತಿಯ ಯಾವ ಪ್ರತೀಕ್ಷೆಯೂ ಇರಲಿಲ್ಲ. ಮತ್ತು ಆ ಸುಧಾರಕರ ಜೀವ ಸಹ ಕೆಲವು ದಿವಸಗಳಲ್ಲಿ ಕೊನೆಗೊಳ್ಳುವಂತೆ ಕಾಣಿಸುತ್ತಿತ್ತು. ಅವರಿಗಿದ್ದ ನಿಷ್ಠೆಯ ಕಾರಣ ಅವರ ವಿಶ್ವಾಸದ ಶಕ್ತಿಯು ಉತ್ಸಾಹವಾಗಿತ್ತು. ಅದರ ಮತ್ತಿನಿಂದ ಅವರು ಜೀವ ನೀಡಲು ಹೇಗೆ ಸಿದ್ಧರಾದರೆಂದರೆ ಕಠಿಣವಾದ ದಾಹದಿಂದ ಬಳಲುವವರು ಸಿಹಿ ನೀರಿನ ಒರತೆಯ ಬಳಿ ಆತುರದಿಂದ ನಿಲ್ಲುವಂತೆ.

ನಾವು ಸಹ ಈ ಸಹಾಬರೆಂಬ ಪ್ರಕಾಶಮಾನರಾದ ನಕ್ಷತ್ರಗಳ ಮಾದರಿಯನ್ನು ಅನುಸರಿಸುತ್ತಾ ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಪ್ರೀತಿಸುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನ ಪ್ರೀತಿಯನ್ನು ಗಳಿಸುವುದಕ್ಕೋಸ್ಕರವಾಗಲಿ – ಆಮೀನ್.

ನಮಾಝ್‌ಗಳ ನಂತರ ಒಂದು ನಮಾಝೆ ಜನಾಝು ಗಾಯಿಬ್ ನಿರ್ವಹಿಸುವೆನು. ಅದು ಮುಕರ್ರಮ ಅರೀಶ ಡೇಫನ್ ಥೂಲರ್ ಸಾಹಿಬರದಾಗಿದೆ. ಅವರು ಹಾಲೆಂಡಿನ ಫಹೀಮ್ ಡೇಫನ್ ಥೂಲರ್ ಸಾಹಿಬ್‌ರವರ ಪತ್ನಿಯಾಗಿದ್ದರು. ಅವರು ಈಗ ಬೆನಿನ್ ದೇಶದಲ್ಲಿ ವಾಸಿಸುತ್ತಿದ್ದರು. ಡಿಸೆಂಬರ್ 11ರಂದು ಅಚಾನಕವಾಗಿ ಹಾರ್ಟ್ ಫೇಲ್ ಆಗಿ ತನ್ನ 62ನೇ ವರ್ಷ ಪ್ರಾಯದಲ್ಲಿ ವಫಾತ್ ಆದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು 2006 ಮಾರ್ಚ್ ದಿನಾಂಕ 18ರಂದು ಬೈಅತ್ ಮಾಡಿದರು. ಅವರು ಖಿಲಾಫತನ್ನು ಬಹಳ ಪ್ರೀತಿಸುತ್ತಿದ್ದರು. 2009ರಲ್ಲಿ ತಮ್ಮ ಪತಿ ಫಹೀಮ್ ಸಾಹಿಬರೊಂದಿಗೆ ಜೀವಿತ ವಕ್‌ಫ್ ಮಾಡಿ ಹ್ಯುಮೇನಿಟಿ ಫಸ್ಟ್‌ನಿಂದ ನಿರ್ಮಿಸಲ್ಪಡುವ ಅನಾಥಾಲಯದ ಮೇಲ್ವಿಚಾರಾಕರಾಗಿ ಪಶ್ಚಿಮ ಆಫ್ರಿಕದ ಬೆನಿನ್‌ಗೆ ಹೋಗಿದ್ದರು. ಅವರು ಯುರೋಪಿಯನ್ ಸಮಾಜದಲ್ಲಿ ಬೆಳೆದವರಾಗಿದ್ದರೂ ಉತ್ತಮ ಉದ್ಯೋಗವಿದ್ದರೂ ಆಫ್ರಿಕದಲ್ಲಿ ಅವರು ಬಹಳ ಕಷ್ಟಕರವಾದ ಪರಿಸ್ಥಿತಿಯಲ್ಲಿ ಬಹಳ ಉತ್ತಮವಾಗಿ ತನ್ನ ವಕ್‌ಫ್ ಹೊಣೆಗಾರಿಕೆಯನ್ನು ನಿಭಾಯಿಸಿದರು. ಅವರು ಬಹಳ ನಿಷ್ಠೆಯಿಂದ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿದರು. ನಮಾಝ್‌ಗಳನ್ನು ಕ್ರಮಬದ್ಧವಾಗಿ ಅನುಷ್ಠಿಸುವವರಾಗಿದ್ದರು. ದಾರುಲ್ ಇಕ್‌ರಾಮ್ ಎಂಬ ಅನಾಥಾಲಯದಲ್ಲಿ ಬಹಳ ಹೃತ್ಪೂರ್ವಕವಾದ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು. ಎಳೆಯ ಶಿಶುಗಳನ್ನು ಎತ್ತಿಕೊಂಡು ನಡೆಯುತ್ತಿದ್ದರು. ಮತ್ತು ಅವರ ಬಗ್ಗೆ ಬಹಳ ಲಕ್ಷ್ಯ ನೀಡುತ್ತಿದ್ದರು. ಅವರ ನಿಧನದ ನಂತರ ದಾರುಲ್ ಇಕ್‌ರಾಮಿನ ಮಕ್ಕಳು ಅನಾಥರಾದರು ಎಂದು ನಾನು ಭಾವಿಸುತ್ತೇನೆ.

ಅಲ್ಲಾಹನು ಅವರ ಸ್ಥಾನಮಾನ ಉನ್ನತಗೊಳಿಸಲಿ. ಅವರಿಗೆ ಮಗ್‌ಫಿರತನ್ನೂ ರಹಮನ್ನೂ ದಯಪಾಲಿಸಲಿ. ಇಂತಹ ನಿಷ್ಠಾವಂತರಾದ, ವಕ್‌ಫಿನ ಆತ್ಮವನ್ನು ಮನವರಿಕೆ ಮಾಡುವವರು ಜಮಾಅತಿಗೆ ಇನ್ನಷ್ಟು ದೊರಕುತ್ತಾ ಇರಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 22-12-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon